ಈ ಸಣ್ಣಪುಟ್ಟ ಮುನಿಸು ಮತ್ತು ಮನಸುಗಳ ನಡುವೆ ಎಂಥದ್ದೋ ಒಂದು ಆಕರ್ಷಣೆ ಇರುವುದೂ, ಆ ಸಲುಗೆಯಲ್ಲೇ ನಿಜವಾದ ಬದುಕಿರುವುದು, ಅರ್ಥಮಾಡಿಕೊಳ್ಳುವ ಸಲುವಾಗಿಯೇ ನಾನಾಬಗೆಯ ಸಾಂಸಾರಿಕ ಒತ್ತಡಗಳಿರುವುದು ಹಾಗೂ ಈ ಪ್ರೀತಿ ಪ್ರೇಮ ಪ್ಯಾರ, ಮೊಹಬ್ಬತ್ ಅಂತಾರಲ್ಲ ಅದರ ಸೆಳೆತವೂ ಇಲ್ಲೇ ಇದೆ ಅನಿಸತೊಡಗಿರಬೇಕು.

ಯಾರಿಗೂ ಕಾಣದಂತೆ ಸ್ಕ್ರೀನ್ ಮೇಲಿದ್ದ ಫೋಟೊಗೆ ಒಂದೆರಡು ಸಲ ತಿವಿದಳು, ಪ್ರೀತಿ ಹೆಚ್ಚಾದಂತೆ ಮುಗುಳ್ನಗೆಯು ಅದ್ಯಾವದೋ ಬಗೆಯ ಉತ್ಸಾಹವನ್ನು ಅವಳಲ್ಲಿ ತುಂಬತೊಡಗಿತು. ಗಳಿಗೆ ನಿಮಿಷವಾಗಿ, ನಿಮಿಷ ಗಂಟೆಯಾಗಿ ಮಾರುದ್ದದಲ್ಲಿದ್ದವ ನಿಧಾನ ಪಡುವಣದ ಗಿಡಮರಗಳ ನಡುವೆ ಮರೆಯಾಗಿ ಕೆಂಬಣ್ಣದ ಹೊಂಬಿಸಿಲಿನ ಹೊಳಪನ್ನು ಇವಳಿಗಾಗಿಯೇ ತೂರಿಬಿಟ್ಟಂತೆ ಅವನು ಹೋದ ದಾರಿ ಕಾಣದಂತೆ ರಂಗೇರುತ್ತಾ ಅದ್ಯಾವ ಮಾಯದಲ್ಲೋ ಹಗಲನ್ನು ಇರುಳು ನುಂಗುತ್ತ ಕತ್ತಲಿಟ್ಟಿತು.

ಸಂತೆಗೆ ಹೋದವರು ಮರಳಿ ಮನೆಗೆ ಬಂದಾಗ ಅದೇ ಆ ನೆನಪುಗಳ ಚಿತ್ರಮಾಲಿಕೆಯಲ್ಲಿ ಚಹಾ ಮಾಡಿಕೊಟ್ಟಳು. ಅಳಿಯದೇವರು ಬಂದು ಹೋದ ಸುದ್ದಿಯನ್ನ ಹೆಂಡತಿಯಿಂದ ಕೇಳಿ ತಿಳಿದ ಅವಳಪ್ಪ ಹಿತ್ತಲಿಗೆ ಬಂದು ಮಗಳ ಮುಖದಲ್ಲಿ ಮಿಣುಗುತ್ತಿದ್ದ ನಾಚಿಕೆಯನ್ನು

